ತೊಗೊಳ್ಳುವ ಪಿನ್ನು, ಟಿಕಳಿ, ಸ್ಟೀಲ್ ಡಬ್ಬಿ... ಇನ್ನಾವುದೋ ಫ್ರೀಯಾಗೆ ಇಸ್ಕೊಂಡು ಬಂದ ಪಿನ್ನು ಇವೆಲ್ಲ ನೋಡೂದ್ರೊಳಗ ನಮ್ಮ ಜೀವನಪ್ರೀತಿ ಮೆರೀತೀವಿ.

ಜೀವನಪ್ರೀತಿ ಅನ್ನೂತ್ಲೆ ನೆನಪಾತು... ಅಗ್ದಿ ಅರಾಮ ಅನಸೂದು, ಬ್ಯೂಟಿ ಪಾರ್ಲರ್‌ನಾಗ ನಮ್ಮನ್ನೇ ನಾವು ಕುರ್ಚಿಮ್ಯಾಲೆ ಅರಾಮಗೆ ಬೆನ್ನಾನಿಸಿ ಕುಂತಾಗ ಅವರು ಹಣಿಮ್ಯಾಲೆ ತಮ್ಮ ಕೈ ಆಡಸ್ಕೊಂತ ಫೇಶಿಯಲ್ ಮಾಡ್ತಾರಲ್ಲ... ಅದು ನೋಡ್ರಿ ಆಹಹಾ... ಹೆಣ್ಣಿನ ಜನ್ಮ ಸಾರ್ಥಕ ಅನಸೂ ಘಳಿಗಿ. ತಿಂಗಳಿಗೆ ಒಮ್ಮೆರೆ ಹಿಂಗ ಪಾರ್ಲರ್‌ನೋರಿಗೆ ಮುಖ ಒಡ್ಡಿ ಕುಂದ್ರೂದು, ಕೈಗೆ ಮೆನಿಕ್ಯೂರ್ ಮಾಡಸ್ಕೊಂಡು, ಕಾಲಿಗೆ ಪೆಡಿಕ್ಯೂರ್‌ನ ಅಕ್ಕರೆಯ ಆರೈಕೆ ನೀಡಸ್ಕೊಂಡು ಬರೂಮುಂದ ನಮಗ ಗೊತ್ತಿಲ್ಲದೆ 'ಮೈ ಚಲಿ ಮೈಚಲಿ... ಬನ್‌ಕೆ ಥಂಡಿ ಹವಾ...' ಹಾಡು ಗುನುಗತಿರ್ತೀವಿ.

ಆದ್ರೂ ಕೆಲವೊಮ್ಮೆ ನಮ್ಮ ಋತುಚಕ್ರದ ಆಜುಬಾಜು, ದೇಹಕ್ಕ, ಮನಸಿಗೆ ಭಾಳ ಕಿರಿಕಿರಿ ಅನಸ್ತದ. ಮೊದಲಿನ್ಹಂಗ ದೂರ ಕೂಡಸ್ಲೇ ಇದ್ರೂ, ಕೆಲಸಾ ಮಾಡಸ್ದೇ ಕೂರಸ್ಲಿ ಸಾಕು ಅಂತ ಅನಸದೇ ಇರಾಂಗಿಲ್ಲ. ಆಗೆಲ್ಲ ಸಣ್ಣದೊಂದು ಅಸಮಾಧಾನದ ಎಳಿ ನಮ್ಮ ಮನಸಿನಾಗ ಹೊಕ್ಕಿರ್ತದ. ನಾ ಅಂದ್ರ ಏನು? ಇಷ್ಟೇನಾ..? ದುಡಿಯುವ ಯಂತ್ರವಾ...? ಮನ್ಯಾಗ ಬಂದ್ರೂ ದುಡಿಮಿ, ರೊಕ್ಕಿಲ್ಲದ ಮೆಚ್ಚುಗೆ ಇಲ್ಲದ ದುಡಿಮಿ, ಹೊರಗ ಹೋದ್ರೂ ದುಡಿಮಿ... ಯಾಕ ದುಡೀಬೇಕು? ಯಾರೀಗೆ ದುಡೀಬೇಕು? ದುಡದು ತಂದ್ರೂ ಒಂದು ದಮಡಿ ಖರ್ಚು ಮಾಡಬೇಕಂದ್ರ ದವಡಿ ಕಚ್ಚಿ ಲೆಕ್ಕಾ ಮಾಡಬೇಕು... ಇದ್ಕಿಂತ ಮನ್ಯಾಗ ಇರೋರೇ ಸುಖದೋರು.. ಇಂಥಾ ತಕ್ಕಡಿ ಲೆಕ್ಕಾ ತೂಗಾಕ ಸುರು ಮಾಡಿರ್ತದ.

ಈ ಅಸಮಾಧಾನ, ದೂರು ಆಗಿ ಬದಲಾಗೂದ್ರೊಳಗ ಹತ್ತು ಸಲೆ ನಮ್ಮೊಳಗಿನ ಸಮಾಧಾನ ಕದಡದೇ ಇರೂಹಂಗ ಬ್ಯಾರೆಬ್ಯಾರೆ ದಾರಿ ಹುಡುಕ್ಕೊಂಡಿರ್ತೀವಿ. ಹಾಡು ಹೇಳೂದು, ಏನರೆ ಅಡಗಿ ಮಾಡೂದು, ಇಂಥಾವೆ... ಅದೇ ಯಾರರೆ ಒಮ್ಮೆ ನಮ್ಮನ್ನ, ನಮ್ಮ ಕೆಲಸಾನ್ನ ಮೆಚ್ಗೊಂಡು, ನಲ್ನುಡಿಯ ಹೇಳಿದ್ರ.. ಹೌದವ್ವಾ... ನೀ ಮಾಡೂದು ಭೊಲೊ ಅದ ಅಂದ್ರ ಸಾಕು... ಇವೆಲ್ಲ ನೀರಿನೊಳಗಿನ ಗುಳ್ಳಿ ಹಂಗ ಪಟಪಟನೆ ಒಡದು ಹೋಗ್ತಾವ. ಮತ್ತ ಸಂಸಾರದ ಸಾಗರದೊಳಗ ಈಜಾಕ ಸುರು ಮಾಡ್ತೀವಿ.

ನಾವು ಅಂದ್ರ ಹಿಂಗೇ... ಸ್ವಾವಲಂಬಿ ಆಗಿದ್ರೂ ಇಡೀ ಮನಿ ಸದಸ್ಯರ ಖುಷಿಯ ಮ್ಯಾಲೆ ನಮ್ಮ ಖುಷಿ ಅವಲಂಬನೆ ಆಗಿರ್ತದ. ಸ್ವಾತಂತ್ರ್ಯ ಇದ್ರೂ ಜವಾಬ್ದಾರಿ ಜೊತಿಗೇ ಇದ್ದು, ಸ್ವೇಚ್ಛೆಯಾಗದೇ ಇರುಹಂಗ ಕಾಯ್ತದ. ಎಲ್ಲರನ್ನೂ ಒಳಗೊಂಡಾಗ ಸಬಲೆ ಅನಸ್ತದ. ಯಾಕಂದ್ರ ನಾನು ಅಂದ್ರ 'ಅವಳು' ಈಗ ಕಣ್ಮುಚ್ರಿ... ನಿಮ್ಮ ಕಣ್ಣಾಗ ನಿಮ್ಮ ಅಂಗಳದಾಗ ಆಡೂ ಮಗಳು ನೆನಪಾಗ್ತಾಳ. ತುಟಿಕಚ್ಚಿ ಅಳುನುಂಗಿ ಕಣ್ಣಾಗ ಸಮಾಧಾನ ಹೇಳಿದ ಮಡದಿ ನೆನಪಾಗ್ತಾಳ. ನೂರು ನೋವು ಹಿಂದಿಕ್ಕಿ ನಗುವ ಅಮ್ಮ ನೆನಪಾಗ್ತಾಳ. ಕಣ್ಣಾಗ ಮೆಚ್ಚಿ ಸೂಸುವ ನಿಮ್ಮ ಆಪ್ತವಲಯದ ಸಖಿ ನೆನಪಾಗ್ತಾಳ. ಎಲ್ಲವನ್ನೂ ತೂಗಿಸಿಕೊಂಡುಹೋಗುವ ಜೀವನ್ಮುಖಿ ನೆನಪಾಗ್ತಾಳ. ನಾನು... ನಾನಂದ್ರ ಜೀವನ್ಮುಖಿ.

✿